ಹಿಂದುಳಿದ ವರ್ಗದವರಿಗೆ ಪ್ರವಾಸಿ ಟ್ಯಾಕ್ಸಿ

2587(1633); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗದವರಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸಲಾಗಿದೆಯೇ, (ಕ್ಷೇತ್ರವಾರು ಮಾಹಿತಿ ಒದಗಿಸುವುದು);

ಆ) ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳೇನು;

ಇ) ಇಲಾಖೆಗೆ ಬಿಡುಗಡೆಯಾಗಿರುವ ಮತ್ತು ಬಳಕೆಯಾಗಿರುವ ಅನುದಾನ ಎಷ್ಟು (ಮಾಹಿತಿಯನ್ನು ಒದಗಿಸುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) 2013–14ನೇ ಸಾಲಿನಿಂದ ಮಾತ್ರ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸಲಾಗುತ್ತಿದೆ. ಜಿಲ್ಲಾವಾರು ಹಂಚಿಕೆ ಮಾಡಿರುವ ಪ್ರವಾಸಿ ಟ್ಯಾಕ್ಸಿಗಳ ಗುರಿಯನ್ನು ಅನುಬಂಧದಲ್ಲಿ ವಿವರಿಸಿದೆ. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.

ಆ) ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು ಕೆಳಗಿನಂತಿವೆ.

1. ಅರ್ಜಿದಾರರು ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.
2. ಅರ್ಜಿದಾರರನ ವಯಸ್ಸು 20 ರಿಂದ 45 ವರ್ಷದೊಳಗಿರಬೇಕು.
3. ಅರ್ಜಿದಾರರು ಕನಿಷ್ಟ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
4. ಹಿಂದುಳಿದ ವರ್ಗದ ಅರ್ಜಿದಾರರಿಗೆ ವಾರ್ಷಿಕ ಆದಾಯ ₹ 4.50 ಲಕ್ಷಗಳನ್ನು ಮೀರಿರಬಾರದು. ಅಲ್ಪಸಂಖ್ಯಾತ ವರ್ಗದ

ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ತಹಶೀಲ್ದಾರ್ ರವರಿಂದ ಪಡೆದ ನಿಗಧಿತ ಪ್ರಮಾಣ ಪತ್ರ ಸಲ್ಲಿಸಬೇಕು.

5. ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು. ಆಯ್ಕೆಯಾದ ಅಭ್ಯರ್ಥಿಗಳು ಮೂರು ತಿಂಗಳಲ್ಲಿ ವಾಹನ ಪರವಾನಗಿ ಬ್ಯಾಡ್ಜನ್ನು ಪಡೆಯತಕ್ಕದ್ದು.

6. ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

7. ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ನೌಕರಿಯಲ್ಲಿರಬಾರದು.

8. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಮೂಲಕ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮಾಡಲಾಗುತ್ತದೆ.

ಇ) 2013–14ನೇ ಸಾಲಿನಲ್ಲಿ ₹ 6.00 ಕೋಟಿಗಳನ್ನು ಒದಗಿಸಿದೆ. ಈ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

2014–15ನೆ ಸಾಲಿನಲ್ಲಿ ₹ 5.00 ಕೋಟಿಗಳನ್ನು ಒದಗಿಸಲಾಗಿದೆ. ಈ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸಲಾಗಿದೆ.

ಅನುಬಂಧ

ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿ ಒದಗಿಸಲು ಜಿಲ್ಲಾವಾರು ಹಂಚಿಕೆ ಮಾಡಿರುವ ಪ್ರವಾಸಿ ಟ್ಯಾಕ್ಸಿಗಳ ಭೌತಿಕ ಗುರಿ ವಿವರ

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಟ್ಯಾಕ್ಸಿಗಳ ಸಂಖ್ಯೆ	ಸಹಾಯಧನ ಮೊತ್ತ
1	ಬೆಂಗಳೂರು (ನ)	144	288.00
2	ಬೆಂಗಳೂರು (ಗ್ರಾ)	29	58.00
3	ರಾಮನಗರ	53	106.00
4	ಚಿತ್ರದುರ್ಗ	62	124.00
5	ದಾವಣಗೆರೆ	51	102.00
6	ಕೋಲಾರ	56	112.00
7	ಚಿಕ್ಕಬಳ್ಳಾಪುರ	63	126.00
8	ಶಿವಮೊಗ್ಗ	77	154.00
9	ತುಮಕೂರು	110	220.00
10	ಚಿಕ್ಕಮಗಳೂರು	59	118.00
11	ದಕ್ಷಿಣ ಕನ್ನಡ	60	120.00
12	ಉಡುಪಿ	36	72.00
13	ಹಾಸನ	93	186.00
14	ಕೊಡಗು	35	70.00
15	ಮಂಡ್ಯ	86	172.00
16	ಮೈಸೂರು	82	164.00
17	ಚಾಮರಾಜನಗರ	43	86.00
18	ಬೆಳಗಾವಿ	128	256.00
19	ಬಿಜಾಪುರ	62	124.00
20	ಬಾಗಲಕೋಟೆ	53	106.00
21	ಧಾರವಾಡ	48	96.00

22	ಗದಗ	40	80.00
23	ಹಾವೇರಿ	65	130.00
24	ಉತ್ತರ ಕನ್ನಡ	94	188.00
25	ಬಳ್ಳಾರಿ	76	152.00
26	ಬೀದರ್	51	102.00
27	ಗುಲ್ಬರ್ಗಾ	90	180.00
28	ಯಾದಗಿರಿ	39	78.00
29	ರಾಯಚೂರು	67	134.00
30	ಕೊಪ್ಪಳ	48	96.00
	ಒಟ್ಟು	**2000**	**4000.00**

ಚಿಕ್ಕೋಡಿ ತಾಲ್ಲೂಕಿನ ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆಯ ರಸ್ತೆಗಳು

2588(2334); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ನಿಪ್ಪಾಣಿ)

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಗೆ ಮಂಜೂರಾದ ರಸ್ತೆಗಳು ಯಾವುವು (ಅವುಗಳ ಹೆಸರು, ಯಾವ ಗ್ರಾಮದಿಂದ ಯಾವ ಯಾವ ಗ್ರಾಮಗಳ ಮೂಲಕವಾಗಿ ಯಾವ ಗ್ರಾಮದವರೆಗಿನ ರಸ್ತೆ ರಸ್ತೆಯ ಉದ್ದ (ಕಿ.ಮೀ) ರಸ್ತೆಯ ಸರಾಸರಿ ಅಗಲ, ಸಂಪೂರ್ಣ ವಿವರ ಒದಗಿಸುವುದು);

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಸ್ತೆಗಳ ಸುಧಾರಣೆ/ಅಭಿವೃದ್ಧಿ ಕೈಗೊಳ್ಳಲಾಗಿದೆಯೇ; ಅಭಿವೃದ್ಧಿಪಡಿಸಿದ ಕಿ.ಮೀ ಎಷ್ಟು (ಮಂಜೂರಾದ ವರ್ಷ, ಯಾವ ಲೆಕ್ಕ ಶೀರ್ಷಿಕೆ, ಯಾವ ಯೋಜನೆಯಲ್ಲಿ, ಅಂದಾಜು ಪಟ್ಟಿಯಂತೆ ನಿಗಧಿಪಡಿಸಿದ ಮೊತ್ತ, (Estimate cost), ಟೆಂಡರ್ ಮೊತ್ತ, ಕಾಮಗಾರಿ ಆರಂಭವಾದ ದಿನಾಂಕ, ಮುಗಿದ ದಿನಾಂಕ, ವೆಚ್ಚವಾದ ಮೊತ್ತ (ರಸ್ತೆಗೆ ಡಾಂಬರೀಕರಣ/ಸಿಮೆಂಟ್ ಕಾಂಕ್ರೀಟ್/ ಪೆವರ್ಸ್ ಮಾಡಿರುವ ಬಗ್ಗೆ ಮಾಹಿತಿ ಒದಗಿಸುವುದು);